ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ 76/2024**

ಪ್ರ.ವ.ಬೋ.ತಾಃ 04-12-2025

ಚಾಸಾಃ 3 ಪ್ರಾಸಾಃ 3

| | |
|---|---|
| ಸಾಕ್ಷಿಯ ಹೆಸರು | ಅಶ್ವತ್ಥಮ್ಮ |
| ತಂದೆ/ಗಂಡನ ಹೆಸರು | ರಾಮಕೃಷ್ಣಯ್ಯ |
| ವಯಸ್ಸು | 35 ವರ್ಷ |
| ವೃತ್ತಿ | ಗಾರ್ಮೆಂಟ್ಸ್ ನಲ್ಲಿ ಕೆಲಸ |
| ವಾಸ | ಹುಣಸವಾಡಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಆರೋಪಿತರು ಗೊತ್ತು. ಚಾಸಾ.1 ನನ್ನ ಗಂಡ, ಚಾಸಾ.2 ನನ್ನ ಭಾವ, ಚಾಸಾ.4 ನನ್ನ ತಾಯಿ. ಕಳೆದ ಒಂದೂವರೆ ವರ್ಷದ ಹಿಂದೆ ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ 1 ನೇ ಆರೋಪಿ ನಮ್ಮ ಜಮೀನನ್ನು ಮಾರಾಟ ಮಾಡಿದ್ದು, ಅದರಿಂದ ಬಂದ ಹಣವನ್ನು ಕೇಳುವ ಸಲುವಾಗಿ ಹೋಗಿದ್ದ ಸಮಯದಲ್ಲಿ ಚಾಸಾ.2 ರವರಿಗೆ 1 ನೇ ಆರೋಪಿ ಬೇವಿನ ಮರದ ಚಕ್ಕೆಯಿಂದ ತಲೆಗೆ ಹಲ್ಲೆ ಮಾಡಿದರು. 2 ನೇ ಆರೋಪಿ ಮಚ್ಚಿನಿಂದ ಚಾಸಾ.2 ರವರ ಕೈಗೆ ಹಲ್ಲೆ ಮಾಡಿದರು. 2 ನೇ ಆರೋಪಿ ದೊಣ್ಣೆಯಿಂದ ಚಾಸಾ.2 ರವರ ಮೈಕೈಗೆ ಹಲ್ಲೆ ಮಾಡಿದರು. ಈ ಗಲಾಟೆಯನ್ನು ನಾವುಗಳು ಬಿಡಿಸಿದೆವು. ಆ ಸಮಯದಲ್ಲಿ ನನಗೆ, ಚಾಸಾ.2 ರವರಿಗೆ 1 ಮತ್ತು 2 ನೇ ಆರೋಪಿತರು ಕೈಗಳಿಂದ ಹೊಡೆದು

ನೋವುಂಟು ಮಾಡಿದರು. ಚಾಸಾ.1 ರವರಿಗೆ 3 ನೇ ಆರೋಪಿ ಹೊಡೆದು ನೋವುಂಟು ಮಾಡಿದರು. 4 ನೇ ಆರೋಪಿ ಚಾಸಾ.4 ರವರ ಜುಟ್ಟು ಹಿಡಿದು ಎಳೆದಾಡಿದರು. ಅಲ್ಲದೇ ಆರೋಪಿತರೆಲ್ಲರೂ ನಮಗೆ ಜೀವ ಬೆದರಿಕೆ ಹಾಕಿದರು. ಆನಂತರ ನಾವುಗಳು ಚಾಸಾ.2 ರವರನ್ನು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆನಂತರ ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಈ ಬಗ್ಗೆ ಚಾಸಾ.1 ರವರು ಪೊಲೀಸರಿಗೆ ದೂರು ನೀಡಿದರು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ